ಉ) ಉಳಿದ ಕೆರೆಗಳನ್ನು ಪುನರುಜ್ಜೀವನ ಕಾಮಗಾರಿಗಳನ್ನು ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಹಂತಹಂತವಾಗಿ ಕೈಗೆತ್ತಿಕೊಳ್ಳಲಾಗುವುದು

ಶ್ರೀ ಬಸವರಾಜು ಎ.ಎಸ್.96(355)

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಅರಸೀಕೆರೆ ಪುರಸಭೆಯಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೂ ಕೊಟ್ಟಿರುವ ಆಶ್ರಯ ಮನೆಗಳ ಸಂಖ್ಯೆ ಎಷ್ಟು?

ಆ) ಈ ಆಶ್ರಯ ಮನೆಗಳನ್ನು ಯಾವ ಆಧಾರದ ಮೇಲೆ ನಿರ್ಮಿಸಲಾಗಿದೆ

ಇ) ಆಶ್ರಯ ಮನೆಗಳನ್ನು ಸಾಲದ ರೂಪದಲ್ಲಿ ಕೊಟ್ಟಿದ್ದಾರೆ, ಸಾಲವನ್ನು ಯಾವ ಯೋಜನೆಗಳಲ್ಲಿ ಕೊಡಲಾಗಿದೆ;

ಈ) ಅಸಲು ಮೊತ್ತ ಮರುಪಾವತಿ ಆಗಿದೆಯೇ ವಸೂಲಾತಿಗೆ ಏನು ಕ್ರಮ ಕೈಗೊಳ್ಳಲಾಗಿದೆ;

ಉ) ಫಲಾನುಭವಿಗಳು ಸಾಲವನ್ನು ಮರುಪಾವತಿಸಲು ಶಕ್ತರಾಗಿದ್ದಾರೆಯೇ, ಸಾಲದ ಮೊತ್ತದ ಹಾಗೂ ಬಡ್ಡಿ ಮರುಪಾವತಿಸಲು ಅಶಕ್ತರಾದವರಿಗೆ ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರದ ಚಿಂತನೆ ನಡೆಸಿದೆಯೇ?

ಶ್ರೀ ಡಿ.ಟಿ.ಜಯಕುಮಾರ್

ಅ)ಅರಸೀಕೆರೆ ಪುರಸಭೆ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಒಟ್ಟು 490 ಆಶ್ರಯ ಮನೆಗಳನ್ನು ನೀಡಲಾಗಿದೆ ವಿವರ ಇಂತಿದೆ.

ಕ್ರ.ಸಂ	ಶ್ರೇಣಿ	ಗುರಿ
1.	2004–2005	ಗುರಿ ನಿಗದಿಪಡಿಸಿರುವುದಿಲ್ಲ
2.	2005–2006	490
3.	2006–2007	ಗುರಿ ನಿಗದಿಪಡಿಸಿರುವುದಿಲ್ಲ.

ಆ) ಸರ್ಕಾರದಿಂದ ನಿಗದಿಪಡಿಸಲಾದ ಗುರಿಗೆ ತಕ್ಕಂತೆ ಫಲಾನುಭವಿಗಳನ್ನು ಆಶ್ರಯ ಸಮಿತಿಯು ಆಯ್ಕೆ ಮಾಡಿದ ತರುವಾಯ ಮನೆಗಳನ್ನು ನಿರ್ಮಿಸಲಾಗುತ್ತದೆ.

ಇ) ನಗರ ಪ್ರದೇಶದಲ್ಲಿ ಪ್ರತಿ ಮನೆಗೆ ರೂ.25000/– ಸಾಲದ ರೂಪದಲ್ಲಿ ಕೊಡಲಾಗಿದೆ. ಮಾಡಿದ ತರುವಾಯ ಯೋಜನೆಯಡಿಯಲ್ಲಿ ಮನೆಗಳನ್ನು ನೀಡಲಾಗಿದೆ.

ಈ) ಇಲ್ಲಿಯವರೆಗೆ ಅರಸೀಕೆರೆ ಪುರಸಭೆಯಿಂದ ರೂ. 2,55,657 ವಸೂಲಾಗಿರುತ್ತದೆ.

ಪ್ರತಿ ತಿಂಗಳು ಪ್ರತಿ ಫಲಾನುಭವಿಗಳು ರೂ.290/–ಸಾಲ ಮರುಪಾವತಿ ಮಾಡಬೇಕಿರುತ್ತದೆ. ಇದನ್ನು ಒಂದೇ ಬಾರಿ ಪಾವತಿಸ ಬೇಕಾಗಿಲ್ಲ. ಪ್ರತಿ ದಿನ ರೂ.5 ರಿಂದ 10 ರಷ್ಟು ಮರುಪಾವತಿ ಮಾಡಬೇಕೆಂದು ಸಾಲ ಪಡೆದ ಎಲ್ಲಾ ಫಲಾನುಭವಿಗಳಿಗೆ ತಿಳಿಸಲು ಕ್ರಮ ತೆಗೆದುಕೊಳ್ಳುವಂತೆ ಸ್ಥಳೀಯ ಸಂಸ್ಥೆಗಳಿಗೆ ತಿಳಿಸಲಾಗಿದೆ.

ಉ) ಹೌದು. ಈಗಾಗಲೇ ಫಲಾನುಭವಿಗಳು ಸಾಲದ ಮೊತ್ತ ಹಾಗೂ ಬಡ್ಡಿ ಮರುಪಾವತಿಸುತ್ತಿದ್ದು, ಸಾಲ ಮನ್ನಾ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.